ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಕೊಡಲಾದ ಉತ್ತರಗಳು

ವಿಷಯ : ಬಾದಾಮಿ ತಾಲ್ಲೂಕಿನಲ್ಲಿ ರೇಷ್ಮೆ ಮಾರುಕಟ್ಟೆಯನ್ನು ಸ್ಥಾಪಿಸುವುದು.

ಪ್ರ. 109 (64) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದ್‌ಗುಡ್ಡ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಬಾದಾಮಿ ತಾಲ್ಲೂಕಿನ ಗುಳೇದ್‌ಗುಡ್ಡದಲ್ಲಿ ರೇಷ್ಮೆ ಮಾರುಕಟ್ಟೆಯನ್ನು ಸ್ಥಾಪಿಸುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ;

(ಆ) ಹಾಗಿದ್ದರೆ ಅದರ ವಿವರಗಳೇನು ?

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಮಂತ್ರಿಗಳು).—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

ವಿಷಯ : ಬಿಜಾಪುರ ಜಿಲ್ಲೆಯ ಪ್ರಸಿದ್ಧ ಸ್ಥಳಗಳಿಗೆ ಬಸ್ ಸೌಲಭ್ಯ.

ಪ್ರ. 110 (62) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದ್‌ಗುಡ್ಡ).—ಮಾನ್ಯ ಪ್ರಚಾರ, ಪಾರ್ಟಿ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಬಿಜಾಪುರ ಜಿಲ್ಲೆಯ ಐತಿಹಾಸಿಕ ಪ್ರಸಿದ್ಧ ಸ್ಥಳಗಳಾದ ಐಹೊಳೆ, ಪಟ್ಟದಕಲ್ಲು, ಶಿವಯೋಗಿ ಮಂದಿರ, ಮಹಾಕೂಟೇಶ್ವರ (ದಕ್ಷಿಣ ಕಾಶಿ) ; ಬನಶಂಕರಿ, ಬಾದಾಮಿ ಈ ಐತಿಹಾಸಿಕ ಪುಣ್ಯಕ್ಷೇತ್ರಗಳೆಂಬುದು ಸರ್ಕಾರದವರಿಗೆ ಗೊತ್ತಿದೆಯೆ ;

(ಆ) ಹಾಗಿದ್ದಲ್ಲಿ ಪ್ರವಾಸಿಗಳಿಗೆ ಸಾಕಷ್ಟು ಸೌಕರ್ಯಗಳನ್ನು ಒದಗಿಸಲು ಕೈಗೊಂಡ ಕ್ರಮಗಳೇನು ;

(ಇ) ಅಲ್ಲಿ ಕಲ್ಪಿಸಿರುವ ಅನುಕೂಲತೆಗಳ ಸ್ವರೂಪವೇನು ;

(ಈ) ಕರ್ನಾಟಕ ರಾಜ್ಯ ಸಾರಿಗೆ ಅಭಿವೃದ್ಧಿ ಮಂಡಲಿ ಬಸ್ ಸೌಲಭ್ಯಗಳನ್ನು ಒದಗಿಸಿದೆಯೇ ? ಇಲ್ಲದಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಪ್ರಚಾರ, ಪಾರ್ಟಿ ಮತ್ತು ಪ್ರವಾಸೋದ್ಯಮ ಸಚಿವರು).—

(ಅ) ಹೌದು.

(ಆ) ಐಹೊಳೆಯಲ್ಲಿ ಪರಿಪೂರ್ಣವಾಗಿ ಕಾರ್ಯ ನಿರ್ವಹಿಸುತ್ತಿರುವ ಒಂದು ವಸತಿ ಗೃಹ ಇದೆ. ಹಾಗೂ ಪಟ್ಟದಕಲ್ಲಿನಲ್ಲಿ ಒಂದು ಉಪಹಾರ, ಶೌಚಗೃಹ ಕಟ್ಟುವ ಯೋಜನೆ ಇದೆ. ಬಾದಾಮಿಯಲ್ಲಿ 14 ಕೊಠಡಿಗಳಿರುವ 'ಮಯೂರ ಚಾಲುಕ್ಯ' ಎಂಬ ವಸತಿ ಗೃಹ ಇದೆ ಮತ್ತು 10 ಕೊಠಡಿಗಳನ್ನು ಹೆಚ್ಚಿಸುವ ಹಾಗೂ ಒಂದು ಪಾಕಶಾಲೆ, ಊಟದ ಮನೆ ಕಟ್ಟುವ ಯೋಜನೆ ಇದೆ.

(ಇ) ಮೇಲಿನಂತೆ.

(ಈ) ಪ್ರಶ್ನೆ ಅನ್ವಯಿಸುವುದಿಲ್ಲ.

ವಿಷಯ : ರೇಷ್ಮೆಗೂಡಿನ ಮಾರುಕಟ್ಟೆಯನ್ನು ಹಾಸನದಲ್ಲಿ ತೆರೆಯುವ ಬಗ್ಗೆ.

ಪ್ರ. 111 (98) ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ನಮ್ಮ ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ರೇಷ್ಮೆ ಫಾರಂಗಳ ಸಂಖ್ಯೆ ಎಷ್ಟು ;

(ಆ) ಇವರಲ್ಲಿ ಎಷ್ಟು ಜನ ಕೂಲಿಗಾರರು ಕೆಲಸ ಮಾಡುತ್ತಿದ್ದಾರೆ ;

(ಇ) ಇವರಿಗೆ ಕೆಲಸದ ನಿಯಮಾವಳಿಯನ್ನು ರೂಪಿಸಲಾಗಿದೆಯೇ ;

(ಈ) ಇವರಿಗೆ ಸರ್ಕಾರದವರು ನೀಡುತ್ತಿರುವ ಕೂಲಿ ಎಷ್ಟು ಮತ್ತು ಇತರ ಸೌಲಭ್ಯಗಳೇನು ?

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಮಂತ್ರಿಗಳು).—

(ಅ) 105.

(ಆ) 1,995.

(ಇ) ಹೌದು.

(ಈ) ಅವರಿಗೆ ವಹಿಸಿರುವ ಕೆಲಸದ ಗುಣಧರ್ಮವನ್ನು ಅನುಸರಿಸಿ ರೂ. 5 ರಿಂದ ರೂ. 9·50 ವರೆಗೆ ದಿನಭತ್ಯೆಯನ್ನು ಕೊಡಲಾಗುತ್ತಿದೆ.

ಇತರ ಸೌಲಭ್ಯಗಳು :

(1) ದಿನಭತ್ಯೆ ಸಹಿತ ವರ್ಷವೊಂದಕ್ಕೆ 10 ದಿನ ಅಸ್ವಸ್ಥತೆ ರಜೆ.

(2) ದಿನಭತ್ಯೆ ಸಹಿತ ರಾಷ್ಟ್ರೀಯ ರಜಾ ದಿನಗಳು.

(3) ದಿನಭತ್ಯೆ ಸಹಿತ ವಾರದ ರಜೆ.

ವಿಷಯ : ರಾಜ್ಯದಲ್ಲಿನ ರಸ್ತೆ ಸಾರಿಗೆಯ ರಾಷ್ಟ್ರೀಕರಣದ ಬಗ್ಗೆ.

ಪ್ರ. 112 (17) ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಪುರ).— ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ರಾಜ್ಯದಲ್ಲಿ ರಸ್ತೆ ಸಾರಿಗೆಯ ರಾಷ್ಟ್ರೀಕರಣವನ್ನು ರದ್ದುಪಡಿಸುವುದು ಸರ್ಕಾರದ ಯೋಚನೆಯಲ್ಲಿದೆಯೇ :

(ಆ) ಹಾಗಿದ್ದಲ್ಲಿ (ಜಿಲ್ಲಾವಾರು) ರದ್ದುಪಡಿಸಲಾಗುವ ರಸ್ತೆಗಳ ಸಂಖ್ಯೆ ಎಷ್ಟು :

(ಇ) ರದ್ದುಪಡಿಸಲು ಕಾರಣವೇನು ;

(ಈ) ಹಳ್ಳಿಗಾಡು ಪ್ರದೇಶಗಳಿಗೆ ಸಾರಿಗೆ ಸಂಪರ್ಕವೇರ್ಪಡಿಸಲು ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮವೇನು ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಸಚಿವರು).—

(ಅ) ಇಲ್ಲ.

(ಆ) ಮತ್ತು (ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

(ಈ) ರಸ್ತೆ ಸಾರಿಗೆ ಸಂಸ್ಥೆಯು ತಕ್ಕ ಕ್ರಮವನ್ನು ತೆಗೆದುಕೊಂಡು ರಾಷ್ಟ್ರೀಕೃತ ಮಾರ್ಗಗಳಲ್ಲಿ ಹೆಚ್ಚಿನ ಸಂಪರ್ಕವೇರ್ಪಡಿಸುತ್ತಿರುತ್ತೆ. ಅಲ್ಲದೆ ರಾಷ್ಟ್ರೀಕರಣವಿಲ್ಲದ ಕಡೆ ಖಾಸಗೀ ಮಾಲೀಕರಿಗೆ ಹೆಚ್ಚಿನ ರವದಾರಿಗಳನ್ನು ಸಂಬಂಧಪಟ್ಟ ಜಿಲ್ಲಾ ಸಾರಿಗೆ ಪ್ರಾಧಿಕಾರಗಳು ಮಂಜೂರು ಮಾಡಿ ಸಾರಿಗೆ ಸಂಪರ್ಕವನ್ನು ಅವಶ್ಯಕತೆಗನುಗುಣವಾಗಿ ಒದಗಿಸುತ್ತಾರೆ.

PAPERS LAID ON THE TABLE

SRI. A. LAKSHMISAGAR (Minister for Law and Parly. (Affairs) .— On behalf of Chief Minister I beg to lay on the table of the House :

"Annual Report of the Karnataka Public Service Commission and Government Memorandum for the years 1976-77, 1977-78 and 1978-79"

As required under Article 323 ಮನವಿಗಳು (2) of the Constitution of India. MR. DY. SPEAKER.– Business Advisory Committee especially on 1st September. 334ರ ಪ್ರಕಾರ ಯಾವುದನ್ನು ಎತ್ತಬಾರದು ಎಂದು ಒಪ್ಪಂದ ಆಗಿ ಸ್ಪೆಷಲ್ ಡಿಮ್ಯಾಂಡ್ ತೆಗೆದುಕೊಳ್ಳಬೇಕೆಂದು ಇರುತ್ತದೆ. ತಾವು 334ರ ಪ್ರಕಾರ ನೋಟೀಸ್ ಕಳುಹಿಸಿಕೊಟ್ಟಿದ್ದೀರಿ, ನಿಲುವಳಿ ಸೂಚನೆಯನ್ನೂ ಕಳುಹಿಸಿಕೊಟ್ಟಿದ್ದೀರಿ. ನನಗೆ ತಿಳಿದಿರುತ್ತದೆ ಸದಸ್ಯರ ಕಳವಳವೇನೆಂಬುದು.

SRI. M. MALLIKARJUN KHARGE .—This is a very important issue. ಉಪಾಧ್ಯಕ್ಷರು .—ನಾಳೆ ಅವಕಾಶ ಮಾಡಿಕೊಡುತ್ತೇನೆ.

SRI. M. MALLIKARJUNA KHARGE :—The Hon'ble Minister was very much pleased to say here that the school will be retained at Yeler village. But at the instance of the other Minister he shifted that. Nearly 80% backward class students are studying in that school. Even the Headmaster has been shifted from that village to some other village. ಮಾನ್ಯ ಅಧ್ಯಕ್ಷರೇ, ಮಂತ್ರಿಗಳಾಗಿ ಏನು ಮಾಡಬೇಕು ಅದನ್ನು ಮಾಡಿಕೊಡಬೇಕು. ಡಿ.ಡಿ.ಪಿ.ಐ. ಅವರನ್ನು ಕಾರಣ ಮಾಡಿದರೆ ಅವರು ಸ್ಯಾಂಕ್ಷನ್ ಮಾಡುತ್ತಾರೆಯೇ ?

ಶ್ರೀ ಬಿ. ರಾಚಯ್ಯ :—ಮಾಸ್ಟರನ್ನು ಆಲ್ಲೇ ಪೋಸ್ಟ್ ಮಾಡಿದ್ದೇವೆಂದು ಹೇಳಿದಮೇಲೆ ಮತ್ತೆ ಏತಕ್ಕೆ ಇವನ್ನು ಪುಸ್ತಾಪಿಸುತ್ತೀರಿ ? I have passed orders to restore him in that school.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ .—

I enquired in the department. You send a message to retain that Head Master. Otherwise all the students will be thrown out. ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಏತಕ್ಕೆಂದರೆ ಇಷ್ಟೊಂದು ಜನ ಇದ್ದಾರೆಂದು ಹೇಳಿದ ಮೇಲೆ ಆಲ್ಲಿಗೆ ಇಲ್ಲಿಗೆ ಷಿಫ್ಟ್ ಮಾಡುತ್ತೇವೆಂದು ಹೇಳಿ ತೊಂದರೆ ಕೊಡಬಾರದು.

ಶ್ರೀ ಬಿ. ಬೈರಪ್ಪಾಜಿ .—334 ರೂಲ್ಸ್ ಪ್ರಕಾರ ನೋಟೀಸ್ ಕೊಟ್ಟಿದ್ದೇವೆ. ತುರುವೇಕೆರೆ ತಾಲ್ಲೂಕು ಜಕ್ಕನಹಳ್ಳಿ,

MR. DY. SPEAKER .—That is a single incident and refers to a particular person. ಕಾಲಿಂಗ್ ಅಟೆನ್‌ಷನ್ ರಿಪೋರ್ಟ್ ತರಿಸುತ್ತೇನೆ, ವಿವರವಾಗಿ ಸ್ಟೇಟ್‌ಮೆಂಟ್ ಕೊಡತಕ್ಕಂಥ ಕೆಲಸ ಮಾಡುತ್ತೇನೆ. ರಿಪೋರ್ಟ್ ಬಂದಮೇಲೆ ತಮಗೆ ತಿಳಿಸುತ್ತೇನೆ.

(ಗೊಂದಲ)